"ಮೇಬಲ್... ಪ್ಲೀಜ್! ಏನೆಲ್ಲಾ ಮಾತನಾಡಬೇಡ."

"ಹಾಗಾದರೆ ಏನದು ಆಲ್ಬರ್ಟ್?"

ಆಲ್ಬರ್ಟ್ ಬಾಯಿಂದ ಪೈಪನ್ನು ಹೊರತೆಗೆದು ಮೇಜಿನ ಮೇಲಿಟ್ಟ. ಆರಾಮ ಕುರ್ಚಿಯ ಮೇಲೆ ಒರಗಿ ಕಾಲುಗಳನ್ನು ನಿಡಿದಾಗಿ ಬಿಡುತ್ತಾ, "ಮೇಬಲ್, ನಾನು ರಾಜಪಾಕ ಎಂಬ ಶಬ್ದವನ್ನು ಬಳಸುತ್ತಿರುವುದು ನೀನು ಈ ಮೊದಲು ಕೇಳಿಸಿಕೊಂಡಿರಬೇಕಲ್ಲ?"

"ನನಗೆ ಜ್ಞಾಪಕವಿಲ್ಲ ಆಲ್ಬರ್ಟ್..."

"ಕಳೆದ ರಾತ್ರಿ ನನಗೆ ಹಠಾತ್ತನೆ ರಾಜಪಾಕದ ನೆನಪಾಯಿತು ಡಿಯರ್. ಪುಟ್ಟಿಯ ಹಾಲಿಗೆ ಒಂಚೂರು ಬೆರೆಸಿದರೆ ಹೇಗೆ ಎಂಬ ಆಲೋಚನೆ ಹೊಳೆಯಿತು. ಪ್ರಯೋಗ ಮಾಡಿಯೇ ಬಿಟ್ಟೆ. ಈಗ ಫಲಿತಾಂಶ ನೀನೇ ನೋಡುತ್ತಿದ್ದೀಯಲ್ಲ!"

"ಆಲ್ಬರ್ಟ್!!..." ಮೇಬಲ್ ಎದ್ದು ತಾರಕ ಸ್ವರದಲ್ಲಿ ಕೂಗಿದಳು.

"ಮೇಬಲ್, ರಾಜಪಾಕವೆಂದರೆ ಏನೆಂದೇ ನಿನಗೆ ಗೊತ್ತಿಲ್ಲ."

"ಅದು ಏನೇ ಆಗಿರಲಿ. ತಲೆ ಸರಿ ಇರುವವರು ಇಷ್ಟ ಪುಟ್ಟ ಮಗುವಿನ ಹಾಲಿನಲ್ಲಿ ಅನ್ಯ ವಸ್ತುವನ್ನು ಬಳಸುತ್ತಾರೆಯೇ?" ಅವಳ ಕಣ್ಣುಗಳಿಂದ ಬೆಂಕಿಯ ಕಿಡಿಗಳು ಹಾರುತ್ತಿದ್ದವು.

"ಅದೊಂದು ಅಪಾಯರಹಿತ ನಿರುಪದ್ರವಿ ವಸ್ತು ಕಣೆ ಮೇಬಲ್. ಅದನ್ನು ಜೇನ್ನೊಣಗಳು ತಯಾರಿಸುತ್ತವೆ. ಸುಖಾಸುಮ್ಮನೆ ಏನೆನ್ನನ್ನೋ ಬೆರೆಸಲು ನನಗೇನು ಹುಚ್ಚೇ?"

"ನನಗೆ ಮೊದಲೇ ಗೊತ್ತಿತ್ತು." ಅವಳು ಅಳು ಮುಖ ಮಾಡಿದಳು.

"ಅದು, ಅದು ಎಷ್ಟೊಂದು ಬೆಲೆ ಬಾಳುವ ವಸ್ತು ಎಂದರೆ, ಸುಲಭದಲ್ಲಿ ಕೈಗೆಟುಕುವ ವಸ್ತುವಲ್ಲ ಕಣೆ. ಸಿಕ್ಕಿದರೂ, ಗುಲಗಂಜಿ ಗಾತ್ರದ್ದು ಕಣೆ. ಅಷ್ಟೊಂದು ಅಪರೂಪ!"

"ನೀನು ಪುಟ್ಟಿಯ ಹಾಲಿನಲ್ಲಿ ಅದನ್ನು ಎಷ್ಟು ಬೆರೆಸಿದೆ ಆಲ್ಬರ್ಟ್?"

"ರಾಜಪಾಕವನ್ನು ಖರೀದಿಸಲು ಸಾಧ್ಯವಿರುವವರು ಇಡೀ ಜೀವಮಾನದಲ್ಲಿ ಸೇವಿಸಲು ಸಾಧ್ಯವಿರುವುದಕ್ಕಿಂತ ಐವತ್ತು ಪಟ್ಟು ಪಾಕವನ್ನು ನಾನು ಪುಟ್ಟಿಯ ನಾಲ್ಕು ಫೀಡಿಂಗ್‌ಗಳಲ್ಲಿ ಉಣಿಸಿದ್ದೇನೆ ಕಣೆ!" ಜಂಭ ಕೊಚ್ಚಿಕೊಳ್ಳುತ್ತಾ ಹೇಳಿದ ಆಲ್ಬರ್ಟ್.

"ಆಲ್ಬರ್ಟ್, ನೀನು ತಮಾಷೆ ಮಾಡಬೇಡ."

"ನಾನು ಹೇಳುತ್ತಿರುವುದು ನಿನ್ನಾಣೆಗೂ ನಿಜ ಕಣೆ!" ಆಲ್ಬರ್ಟ್ ಹೆಮ್ಮೆಯಿಂದ ಬೀಗುತ್ತಾ ಹೇಳಿದ.

ಮೇಬಲ್ ಅವನನ್ನೇ ದಿಟ್ಟಿಸುತ್ತಾ ತೆಪ್ಪಗಾದಳು. ಅವಳ ತುಟಿಗಳು ಆಶ್ಚರ್ಯದಿಂದ ಬಿರಿದಿದ್ದವು.

"ಈ ರಾಜಪಾಕವನ್ನು ಕೊಳ್ಳುವುದಾದರೆ ಬೆಲೆ ಎಷ್ಟೆಂದು ಗೊತ್ತೇನೇ ಮೇಬಲ್? ಅಮೆರಿಕಾದ ಒಂದು ಕಂಪನಿ ಒಂದು ಸಣ್ಣ ಬಾಟಲಿಗೆ ಐನೂರು ಡಾಲರುಗಳಿಗೆ ಮಾರುತ್ತಿದೆ! ಬಂಗಾರಕ್ಕಿಂತ ದುಬಾರಿ, ಗೊತ್ತಾಯ್ತೇನೇ?"

ಆಲ್ಬರ್ಟನ ವಿವರಣೆ ಅವಳ ಆಳಕ್ಕೆ ಮೀರಿದ್ದಾಗಿತ್ತು. ಅವನು ತನ್ನ ಪುಸ್ತಕಗಳ ಬೀರುವಿನತ್ತ ಹೋಗಿ 'ಅಮೆರಿಕನ್ ಬೀ ಜರ್ನಲ್' ನಿಯತಕಾಲಿಕಗಳ ಒಂದು ಕಟ್ಟನ್ನೇ ಹೊತ್ತು ಬಂದ. ಒಂದನ್ನೆತ್ತಿ ಕೊನೆಯ ಪುಟವನ್ನು ಮಗುಚುತ್ತಾ, "ಹಾಂ, ಇಲ್ನೋಡು ಈ ಜಾಹೀರಾತು... ರಾಜಪಾಕ, ಕೇವಲ 480 ಡಾಲರುಗಳಿಗೆ..." ಎಂದು ಅವಳ ಕೈಗಿತ್ತ.

"ಅದೇನಿದ್ದರೂ, ಈ ವಸ್ತುವನ್ನು ಮಕ್ಕಳಿಗೆ ಕೊಡಬಹುದೆಂದು ಇಲ್ಲಿ ಎಲ್ಲೂ ತಿಳಿಸಿಲ್ಲ." ಜಾಹೀರಾತಿನ ಮೇಲೊಮ್ಮೆ ಕಣ್ಣಾಡಿಸುತ್ತಾ ಮೇಬಲ್ ಹೇಳಿದಳು.

"ಆದರೂ, ನಮ್ಮ ಸಮಸ್ಯೆಗೆ ಪರಿಹಾರ ಸಿಗಲಿಲ್ಲವೇನೇ?"